ನಿವೇಶನಗಳನ್ನು ಹಂಚಿಕೆ ಮಾಡಂವ ಬಗ್ಗೆ – ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ

೧೩೮೧. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾನಗರ ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ೮೦x೫೦ ಅಳತೆಯ ನಿವೇಶನಗಳು ಹಾಗೂ ಶಾಸಕರ ಸಹಕಾರಿ ಸಂಘಕ್ಕೆ ೬೦x೬೦x೪೦ ಅಳತೆಯ ನಿವೇಶನಗಳು ಮಂಜೂರು ಮಾಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ತಾರತಮ್ಯಕ್ಕೆ ಕಾರಣವೇನು ?

ಇ) ಸದರಿ ಮಹಾನಗರ ಗೃಹ ನಿರ್ಮಾಣ ಸಹಕಾರಿ ಸಂಘದ ಸದಸ್ಯರುಗಳಿಗೆ ಸ್ಥಳೀಯ ಪ್ರಮಾಣ ಪತ್ರದ ಬಗ್ಗೆ ವಿನಾಯಿತಿ ಇದೆಯೇ ?

ಈ) ಹಾಗಿದ್ದಲ್ಲಿ ಯಾವಾಗಿನಿಂದ ಈ ವಿನಾಯಿತಿ ನೀಡಲಾಗುತ್ತಿದೆ ?

ಉ) ಮೇಲ್ಕಂಡ ಉಭಯ ಸಂಘಗಳಿಗೆ ನಿಗಧಿ ಗೊಳಿಸಿರುವ ನಿವೇಶನಗಳ ದರವೆಷ್ಟು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) —

ಅ) ನಿಜ.

ಆ) ಉದ್ಭವಿಸುವುದಿಲ್ಲ.

ಇ) ಇದೆ.

ಈ) ೯-೮-೧೯೮೪ ರಿಂದ

ಉ) ಮೆಟ್ರೋಪಾಲಿಟನ್ ಗೃಹ ನಿರ್ಮಾಣ ಸಹಕಾರ ಸಂಘವೇ ನಿವೇಶನ ಹಂಚಿಕೆ ದರವನ್ನು ನಿಗಧಿಪಡಿಸುತ್ತದೆ.

ಶಾಸಕರ ಗೃಹನಿರ್ಮಾಣ ಸಹಕಾರ ಸಂಘದ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿದ ನಿವೇಶನವನ್ನು ಈ ಕೆಳಕಂಡ ದರಗಳಲ್ಲಿ ಹಂಚಲಾಗಿದೆ.

ನಿವೇಶನಗಳ ಅಳತೆ	ಚ. ಮೀಟರ್ ಒಂದಕ್ಕೆ ದರ	
೩೦ × ೪೦ ಅಡಿ	ರೂ.	೫೦-೦೦
೩೦ × ೪೫ ಅಡಿ	ರೂ.	೬೦-೦೦
೩೦ × ೫೦ ಅಡಿ	ರೂ.	೬೫-೦೦
೪೦ × ೬೦ ಅಡಿ	ರೂ.	೭೫-೦೦
೬೦ × ೯೦ ಅಡಿ	ರೂ.	೧೦೫-೦೦

ಲೋಕಲ್ ಫೈನಾನ್ಸ್ ಕಮಿಷನ್ನಿನ ವರದಿ

೭೩೨. ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಗರಸಭೆಗಳ ಸಂಪನ್ಮೂಲಗಳ ಪರಿಸ್ಥಿತಿ ಅಧ್ಯಯನಕ್ಕೆ ನೇಮಕಗೊಂಡ ಪ್ರೊ. ಜೇಕಬ್ ಸಮಿತಿಯು ವರದಿ ಸರ್ಕಾರದವರಿಗೆ ಬಂದಿದೆಯೆ

ಆ) ಹಾಗಿದ್ದರೆ ಆದರ ಶಿಫಾರಸ್ಸುಗಳನ್ನು ಯಾವಾಗ ಜಾರಿಗೊಳಿಸಲಾಗುವುದು.